ಮಹಿಳಾದಿನ
ವಿಶೇಷ



# ಸೌಂದರ್ಯ ಪರಿಷೆಯಲ್ಲಿ ಹೆಣ್ಣೆಂಬ ಸರಕು

**ಮಾಧ್ಯಮಗಳು ಮತ್ತು ಜಾಹೀರಾತುಗಳಲ್ಲಿ ಹೆಣ್ಣು ಸೌಂದರ್ಯದ ಸರಕಾಗಿ ಬಳಕೆಯಾಗುವುದೇ ಹೆಚ್ಚು. ಇದರ ಹಿಂದಿನ ಮನಸ್ಥಿತಿ ಯಾವ ಬಗೆಯದು? ಇಂದಿನ ಜಾಹೀರಾತು ಪ್ರಣೀತ ಸೌಂದರ್ಯದ ವ್ಯಾಖ್ಯಾನವೇ ಹೆಣ್ಣನ್ನು ಪ್ರದರ್ಶನದ ಸರಕಾಗಿಸುವುದು.**

■ ಸುಮನ್ ಕಿತ್ತೂರು

ಇತ್ತೀಚೆಗೆ ಫೇಸ್‌ಬುಕ್‌ನಲ್ಲಿ ಒಂದು ಪೋಸ್ಟ್ ನೋಡಿದೆ. ಆ ಪೋಸ್ಟ್ ಹೀಗಿತ್ತು: 'ನೀನು ಬೆಳ್ಳಗಾಗಬೇಕು. ನಿನ್ನ ಕೂದಲನ್ನು ನುಣ್ಣಗೆ ಮಾಡಿಕೊ. ಪಾದಗಳು ಹೊಳೆಯುತ್ತಲಿರಲಿ. ಉಗುರುಗಳು ನುಣ್ಣಾನೆ ನುಣುಪಾಗಿರಲಿ...' ನಾವು ನಮ್ಮ ಹೆಣ್ಣುಮಕ್ಕಳಿಗೆ ಸೌಂದರ್ಯದ ಪರಿಕಲ್ಪನೆಯನ್ನು ಕಲಿಸುವುದು ಹೀಗೆ. ಆದರೆ ನಾವು ನಿಜವಾಗಿಯೂ ಕಲಿಸಬೇಕಾಗಿರುವುದು ಇದನ್ನಲ್ಲ; ಸೌಂದರ್ಯವೆಂಬುದು ಆಂತರಿಕವಾಗಿ ಇರುವಂಥದ್ದು ಎನ್ನುವ ಅರಿವು ಮೂಡಿಸಬೇಕು.'

ಮಾಧ್ಯಮಗಳು, ಸಿನಿಮಾಗಳು, ಜಾಹೀರಾತುಗಳು ಎಲ್ಲದರಲ್ಲಿಯೂ ಹೆಣ್ಣನ್ನು ಬಹುತೇಕ ಮಾರಾಟದ ಸರಕಾಗಿಯೇ ಬಳಸಿಕೊಳ್ಳಲಾಗುತ್ತಿದೆ. ಗಂಡುಮಕ್ಕಳ ಚಡ್ಡಿ ಜಾಹೀರಾತಿಗೂ ಹೆಣ್ಣುಮಕ್ಕಳನ್ನೇ ಕರೆದುಕೊಂಡುಬರುತ್ತಾರೆ. ಇದನ್ನು ಹೇಗೆ ಅರ್ಥೈಸಿಕೊಳ್ಳಬೇಕು? ಮಾರಾಟದ ಸರಕು ಎಂದು ತಾನೆ? ನಮ್ಮ ಪ್ರಾಡೆಕ್ಟ್‌ಗಳನ್ನು ಮಾರಬೇಕು ಎಂದರೆ ಪ್ರಾಣಿ–ಪಕ್ಷಿಗಳನ್ನು ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲವಲ್ಲ. ಹಾಗಾಗಿ ಹೆಣ್ಣುಮಕ್ಕಳನ್ನು ತೆಗೆದುಕೊಳ್ಳುತ್ತಾರೆ. ಎಲ್ಲ ಧಾರಾವಾಹಿಗಳಲ್ಲಿಯೂ ಹೆಣ್ಣುಮಕ್ಕಳು ಒಂದು ಸರಕಾಗಿಯೇ ಬಳಕೆಯಾಗುತ್ತಿದ್ದಾರೆ.

ಜಾಹೀರಾತುಗಳಿರಬಹುದು ಅಥವಾ ಯಾವುದೇ ಮನರಂಜನೆ ಇರಬಹುದು. ಸಿನಿಮಾವನ್ನೇ ತೆಗೆದುಕೊಳ್ಳಿ; ಹೆಣ್ಣನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ? ಯಾವ ರೀತಿ ನೋಡುತ್ತಿದ್ದೇವೆ? ಇದೊಂದು ಜನಪ್ರಿಯ ಮಾದರಿಯಾಗಿಯೇ ಚಾಲ್ತಿಯಲ್ಲಿದೆ. ಆ ರೂಢಿಗತ ಮನಸ್ಥಿತಿ ಯಾವ ಮಟ್ಟಕ್ಕೆ ಬೇರೂರಿದೆ ಎಂದರೆ ಯಾವುದನ್ನೂ ನಾವು ಒಗ್ಗೂಡಿ ಪ್ರಶ್ನೆ ಮಾಡಲಿಕ್ಕೇ ಸಾಧ್ಯವಾಗುತ್ತಿಲ್ಲವಲ್ಲ... ಅಷ್ಟು ದೂರ ಬಂದುಬಿಟ್ಟಿದ್ದೇವೆ. ಯಾಕೆ ಹೀಗಾಗಿದೆ?

ಸೌಂದರ್ಯ ಎನ್ನುವ ಪರಿಕಲ್ಪನೆಯನ್ನು ತೆಗೆದುಕೊಳ್ಳಿ. ಕಣ್ಣಿಗೆ ಕಾಡಿಗೆ ಹಾಕಿಕೊಳ್ಳುವುದು, ಕೆನ್ನೆಯನ್ನು ನುಣ್ಣಗೆ ಇಟ್ಟುಕೊಳ್ಳುವುದು, ಕೂದಲನ್ನು ನುಣುಪಾಗಿಸಿಕೊಳ್ಳುವುದೇ ಸೌಂದರ್ಯ ಎನ್ನುವ ಪರಿಕಲ್ಪನೆಗಳನ್ನು ನಮ್ಮ ಮಕ್ಕಳ ಮನಸ್ಸಿನಲ್ಲಿ ಬಲವಾಗಿ ಮೂಡಿಸುತ್ತಿದ್ದೇವೆ.

'ಬೆಳ್ಳಗಾಗುವುದಕ್ಕೆ ಫೇರ್ ಆ್ಯಂಡ್ ಲವ್ಲೀ ಹಚ್ಚಿಕೊಳ್ಳಿ' ಎಂದು ಸಾರುವ ಜಾಹೀರಾತೊಂದಿದೆಯಲ್ಲ, ಅದು ಚಿಕ್ಕವಯಸ್ಸಿನಿಂದ ಹಿಡಿದು ಇಂದಿಗೂ ನನ್ನನ್ನು ತುಂಬಾ ಕಾಡುತ್ತದೆ. ಆ ಜಾಹೀರಾತಿನಲ್ಲಿ ಕಪ್ಪಗಿರುವವಳು ಬೆಳ್ಳಗಾದಳು ಎಂದು ತೋರಿಸುತ್ತಾರೆ. ಇಂಥ ಒಂದಿಷ್ಟು ಕ್ರೀಮ್‌ಗಳ ಮಾರಾಟಕ್ಕಾಗಿ ಬೆಳ್ಳಗಾಗುವುದೇ ಸೌಂದರ್ಯದ ಮಾನದಂಡ ಎಂಬ ಭಾವನೆಯನ್ನು ಬಿತ್ತುತ್ತಾರಲ್ಲ, ಅದಕ್ಕಿಂತ ದೊಡ್ಡ ದುರಂತ, ದುರಾಲೋಚನೆ, ಅಸಹ್ಯ ಇನ್ನೊಂದಿಲ್ಲ. ನಿಜವಾಗಿಯೂ ನಮಗೆ ಬೇಕಾ ಇದು? ನಾವ್ಯಾಕೆ ಇಂಥ ದುರಂತಗಳನ್ನು ಪ್ರಶ್ನಿಸಲು ಸಾಧ್ಯವಾಗುತ್ತಿಲ್ಲ? ಬಹುಶಃ ಬೇರೆ ಯಾವ ದೇಶಗಳಲ್ಲಿಯೂ ಇಂಥ ಜಾಹೀರಾತು ಪ್ರಸಾರವಾಗಲು ಬಿಡುವುದಿಲ್ಲ. ಇವರ ಪ್ರಕಾರ ಸೌಂದರ್ಯ ಎಂದರೆ ಬೆಳ್ಳಗಿರುವುದು ಎಂದಷ್ಟೆ.

ಮಗು ಹೊಟ್ಟೆಯಲ್ಲಿ ಇರುವಾಗಲೇ ಅವಳನ್ನು ಇಂಥ 'ಬೆಳ್ಳಗಿನ ಸೌಂದರ್ಯ'ದ

